**OS.No**.22/2016 **P W**-6

**ದಿನಾಂಕಃ 10.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲು 1, 2(ಎ) ಪ್ರತಿವಾದಿ ಪರ ಶ್ರೀ. ಕೆ.ಕೆ.ಆರ್. ವಕೀಲರಿಂದಃ-**

ನನ್ನ ತಂದೆ ವೀರಪ್ಪರವರ ಆಸ್ತಿಯನ್ನು ಈ ದಾವೆಯಲ್ಲಿ ಸೇರ್ಪಡೆ ಮಾಡಿಲ್ಲವೆಂದರೆ ಗೊತ್ತಿಲ್ಲ. ದಾವಾ ಆಸ್ತಿಯು ನಿಮ್ಮ ತಂದೆಯಾ ಆಸ್ತಿಗಳಾ ಅಥವಾ ತಾಯಿಯ ಕಡೆಯಾ ಆಸ್ತಿಗಳಾ ಎಂದರೆ ಸಾಕ್ಷಿ ಅದು ಯಾವುದು ನನಗೆ ಗೊತ್ತಿಲ್ಲ, ಆದರೆ ಅವು ನಮ್ಮ ತಾತನ ಕಾಲದಿಂದ ಬಂದತಹ ಆಸ್ತಿಗಳಾಗಿರುತ್ತವೆ ಎಂದು ನುಡಿಯುತ್ತಾರೆ. ನನಗೆ ಈ ದಾವೆಯ ಬಗ್ಗೆ ಮಾಹಿತಿ ಇದೆ. ನೀವು ವಾದ ಪತ್ರದಲ್ಲಿಯ ಅಂಶಗಳನ್ನು ಸಂಪೂರ್ಣವಾಗಿ ಓದಿ ತಿಳಿದುಕೊಂಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಾನು ನನ್ನ ಇಚ್ಛೆಯಿಂದಲೇ ಈ ದಾವೆಯನ್ನು ಸಲ್ಲಿಸಿರುತ್ತೇನೆ.

ನನ್ನ ತಾಯಿ ವಿಶ್ವನಾಥಪ್ಪರವರಿಂದ ಖರೀದಿ ಮಾಡಿದಂತಹ ಸ.ನಂ.1/2 ರಲ್ಲಿ ಇರುವ ಮನೆಯು ದಾವಾ ಅನುಸೂಚಿ 1 ರ ಮನೆ ಇರುತ್ತದೆ ಎಂದರೆ ಗೊತ್ತಿಲ್ಲ. ದಾವಾ ಅನುಸೂಚಿ ಕ್ರಮಸಂಖ್ಯೆ 2 ರ ಆಸ್ತಿಯನ್ನು ನನ್ನ ತಾಯಿ ಶುದ್ಧ ಕ್ರಯಪತ್ರದ ಮೂಲಕ ಖರೀದಿ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ಕ್ರಮಸಂಖ್ಯೆ.2 ರ ಕ್ರಯಪತ್ರವು ದಿಃ 11.03.1996 ರಂದು ನೋಂದಣಿಯಾಗಿರುತ್ತದೆ ಎಂದರೆ ಗೊತ್ತಿಲ್ಲ. ಕ್ರಮಸಂಖ್ಯೆ.2 ಅನ್ನು ಖರೀದಿ ಮಾಡಿದ ನಂತರ ನನ್ನ ತಾಯಿ ಅದೇ ಆಸ್ತಿಯಲ್ಲಿ ಕ್ರಮಸಂಖ್ಯೆ.1 ರ ಮನೆಯನ್ನು ಕಟ್ಟಿರುತ್ತಾರೆ ಎಂದರೆ ಗೊತ್ತಿಲ್ಲ.

ಕ್ರಮಸಂಖ್ಯೆ 3 ರ ಸ್ವತ್ತನ್ನು ನನ್ನ ತಾಯಿ ದಿಃ 13.01.1960 ರಂದು ವಡೆಯರಕೊಪ್ಪಲು ವಾಸಿ ಮಠದ ಕರಿಯಪ್ಪರವರ ಮಗ ಶಿವಲಿಂಗಯ್ಯ ಹಾಗೂ ಕ್ಯಾತನಹಳ್ಳಿ ಗ್ರಾಮದ ಸ್ಕೂಲ್ ಮಾಸ್ಟರ್ ಕೆ.ಅಣ್ಣಯ್ಯರವರಿಂದ ಖರೀದಿ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ಕ್ರಮಸಂಖ್ಯೆ 3 ರಲ್ಲಿಯ ಭಾಗಶಃ ಆಸ್ತಿ ಹೇಮಾವತಿ ನಾಲೆಗೆ ಭೂಸ್ವಾಧೀನವಾಗಿರುತ್ತದೆ ಎಂದರೆ ಹೌದು. ಭೂಸ್ವಾಧೀನದ ಭೂ ಪರಿಹಾರದ ಹಣವನ್ನು ನನ್ನ ತಾಯಿ ಗೌರಮ್ಮ ಒಬ್ಬರೇ ಪಡೆದುಕೊಂಡಿರುತ್ತಾರೆ ಎಂದರೆ ಗೊತ್ತಿಲ್ಲ. ಕ್ರಮಸಂಖ್ಯೆ 4ರ ಆಸ್ತಿ ನನ್ನ ತಾಯಿ ಗೌರಮ್ಮಳ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಕ್ರಮಸಂಖ್ಯೆ 3 ಮತ್ತು 4 ರ ಸ್ವತ್ತು ನನ್ನ ತಾಯಿ ಗೌರಮ್ಮಳ ಸ್ವಯಾರ್ಜಿತ ಆಸ್ತಿಗಳಾಗಿದ್ದರಿಂದ ಅವುಗಳನ್ನು ನನ್ನ ತಾಯಿ ಅವರ ಹಿರಿಯ ಮಗ ಕೆ.ವಿ.ಶಂಬುಲಿಂಗಪ್ಪರವರರಿಗೆ ಹಕ್ಕು ಖುಲಾಸೆ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ನಮಗೆ ತಿಳಿಸದೇ ಮಾಡಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಹಕ್ಕು ಖುಲಾಸೆ ಪತ್ರ ದಿಃ04.02.2016 ರಲ್ಲಿ ನೋಂದಣಿಯಾಗಿರುತ್ತದೆ ಎಂದರೆ ಸಾಕ್ಷಿ ನನಗೆ ಏನೂ ತಿಳಿಸದೇ ಮಾಡಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಮೊದಲೇ ವಿಭಾಗದ ಮೂಲಕ ಕ್ರಮಸಂಖ್ಯೆ 3 ಮತ್ತು 4 ಅನ್ನು ಹಿರಿಯ ಮಗ ಶಂಭುಲಿಂಗಪ್ಪರವರಿಗೆ ಕೊಟ್ಟಿದ್ದು, ಅವು ತನ್ನ ಸ್ವಯಾರ್ಜಿತ ಆಸ್ತಿಗಳು ಹಾಗೂ ಅವುಗಳ ಮೇಲೆ ಶಂಭುಲಿಂಗಪ್ಪರವರಿಗೆ ಹಕ್ಕು ಇರುತ್ತದೆ ಎಂದು ನನ್ನ ತಾಯಿ ಗೌರಮ್ಮ ಹಕ್ಕು ಖುಲಾಸೆ ಪತ್ರದಲ್ಲಿ ಸ್ಪಷ್ಟವಾಗಿ ಬರೆಸಿರುತ್ತಾರೆ ಎಂದರೆ ಸಾಕ್ಷಿ ಎಲ್ಲಾ ಮಕ್ಕಳಿಗೂ ಸಮನಾಗಿ ಕೊಡಬೇಕು ಅಲ್ಲದೇ ಯಾರಿಗೂ ತಿಳಿಯದ ರೀತಿಯಲ್ಲಿ ಹಕ್ಕು ಪತ್ರ ಮಾಡಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಕ್ರಮಸಂಖ್ಯೆ 3 ಮತ್ತು 4 ರ ಮೇಲೆ ನನ್ನ ಯಾವುದೇ ಮಕ್ಕಳಿಗೆ ಹಕ್ಕು

ಖುಲಾಸೆ ಇಲ್ಲ ಎಂದು ಖುಲಾಸೆ ಪತ್ರದಲ್ಲಿ ನನ್ನ ತಾಯಿ ಗೌರಮ್ಮ ಹೇಳಿರುತ್ತಾರೆ ಎಂದರೆ ಸಾಕ್ಷಿ ಶಂಭಲಿಂಗಪ್ಪ ಮಾತ್ರ ಮಗ ಅಲ್ಲ, ಅವರಿಗೆ 6 ಜನ ಮಕ್ಕಳು ಇರುತ್ತಾರೆ ಎಂದು ನುಡಿಯುತ್ತಾರೆ. ಕೆ ವಿ ಶಂಭುಲಿಂಗಪ್ಪರವರ ತಮ್ಮ ಕೆ ವಿ ಮಂಜುನಾಥ್ ರವರು ನನ್ನ ಅಳಿಯ ಹಾಗೂ ತಮ್ಮನಾಗಬೇಕು ಎಂದರೆ ಹೌದು. ಈ ದಾವೆಗೆ ಸೇರ್ಪಡೆಯಾಗುವ ಮೊದಲು ನೀವೇನಾದರೂ 5ನೇ ಪ್ರತಿವಾದಿಯೊಂದಿಗೆ ಮಾತನಾಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಕೆ ವಿ ಶಂಭುಲಿಂಗಪ್ಪರವರಿಗೆ ಹಿಸ್ಸೆ ಕೊಟ್ಟ ರೀತಿಯಲ್ಲಿಯೇ ಕೆ ವಿ ಮಂಜುನಾಥ್ ರವರಿಗೂ ಸಹಾ ನನ್ನ ತಾಯಿ ಗೌರಮ್ಮ ಕ್ರಮಸಂಖ್ಯೆ 1 ಮತ್ತು 2 ರ ಸ್ವತ್ತನ್ನು ಕೊಟ್ಟಿದ್ದರು ಎಂದರೆ ಹೌದು. ಕ್ರಮಸಂಖ್ಯೆ 5 ಅನ್ನು ನನ್ನ ತಾಯಿ ಗೌರಮ್ಮ ಖರೀದಿ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ಕ್ರಮಸಂಖ್ಯೆ 5 ರ ಆಸ್ತಿ ಗೌರಮ್ಮರವರ ಸ್ವಯಾರ್ಜಿತ ಆಸ್ತಿಯಾಗಿದ್ದು, ಅವರು ಯಾರ ಹಸ್ತಕ್ಷೇಪವೂ ಇಲ್ಲದೇ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿ ನಾವು ಕೇಳಿಲ್ಲ, ಅವರು ಹೇಳಿಲ್ಲ ಎಂದು ನುಡಿಯುತ್ತಾರೆ.

ನೀವು ನಿಮ್ಮ ತಾಯಿ ಗೌರಮ್ಮರವರನ್ನು ಎಷ್ಟು ವರ್ಷಗಳಿಂದ ಸಂರ್ಪಕಿಸಿಲ್ಲ ಎಂದರೆ ಸಾಕ್ಷಿ ಪೋನಿನಲ್ಲಿ ಆಗಾಗ ಮಾತನಾಡುತ್ತೇವೆ ಎಂದು ನುಡಿಯುತ್ತಾರೆ. ನ್ಯಾಯಾಲಯಕ್ಕೆ ನೀವು 6 ಮತ್ತು 7ನೇ ಪ್ರತಿವಾದಿಯರನ್ನು ಕರೆಸುತ್ತೀರಾ ಎಂದರೆ ಸಾಕ್ಷಿ 7 ನೇ ಪ್ರತಿವಾದಿ ನನ್ನ ಸಂಪರ್ಕದಲ್ಲಿ ಇಲ್ಲ, ಆದರೆ 6ನೇ ಪ್ರತಿವಾದಿಯನ್ನು ಕರೆಸುತ್ತೇನೆ ಎಂದು ನುಡಿಯುತ್ತಾರೆ. 12ನೇ ಪ್ರತಿವಾದಿಯನ್ನು ಯಾವ ಉದ್ದೇಶಕ್ಕಾಗಿ ಪಕ್ಷಗಾರರನ್ನಾಗಿ ಮಾಡಿರುತ್ತೇನೆ ಎಂದು

ನನಗೆ ಗೊತ್ತಿಲ್ಲ. ಭೂಸ್ವಾಧೀನಕ್ಕೆ ಸಂಬಂಧಪಟ್ಟಂತೆ ನನ್ನ ತಾಯಿ ಗೌರಮ್ಮ ನ್ಯಾಯಾಲಯಕ್ಕೆ 18(1) ಅರ್ಜಿ ಸಲ್ಲಿಸಿ ಕೇಸು ನಡೆಸುತ್ತಿದ್ದಾರೆ ಎಂದರೆ ಗೊತ್ತಿಲ್ಲ. ಕ್ರಮಸಂಖ್ಯೆ 3 ಗೌರಮ್ಮ ರವರ ಸ್ವಯಾರ್ಜಿತ ಆಸ್ತಿಯಾಗಿರುವುದರಿಂದ ಭೂಸ್ವಾಧೀನಕ್ಕೆ ಸಂಬಂಧಪಟ್ಟ ಪರಿಹಾರಕ್ಕೆ ಗೌರಮ್ಮ ಒಬ್ಬರೇ ಅರ್ಹರಾಗಿರುತ್ತಾರೆ ಎಂದರೆ ಸರಿಯಲ್ಲ.

1ನೇ ಪ್ರತಿವಾದಿ ಗೌರಮ್ಮರವರಿಗೆ ಈಗ 90 ವರ್ಷ ವಯಸ್ಸಾಗಿದ್ದು, ಆನಾರೋಗ್ಯದಲ್ಲಿ ಇದ್ದಾರೆ ಎಂದರೆ ಹೌದು. ನನ್ನ ತಾಯಿ ಗೌರಮ್ಮರವರನ್ನು ನಾನಾಗಲೀ ಅಥವಾ ಯಾವುದೇ ಹೆಣ್ಣುಮಕ್ಕಳಾಗಲೀ ಆರೈಕೆ ಮಾಡುತ್ತಿಲ್ಲ, ಅವರನ್ನು ಕೆ ವಿ ಶಂಬುಲಿಂಗಪ್ಪ ರವರ ಹೆಂಡತಿ ಮತ್ತು ಮಕ್ಕಳಾದ ಪ್ರತಿವಾದಿ ನಂ.2(ಎ) ಮತ್ತು 3ರವರು ಆರೈಕೆ ಮಾಡುತ್ತಿದ್ದಾರೆ ಎಂದರೆ ಸಾಕ್ಷಿ ಆರೈಕೆ ಮಾಡುತ್ತಿರುವುದು ನಿಜ, ಏಕೆಂದರೆ ನನ್ನ ತಾಯಿಗೆ ಬರುವ ಎಲ್ಲಾ ಬೆನಿಫಿಟ್ ಗಳನ್ನು ಪಡೆಯುವ ಸಲುವಾಗಿ ಆರೈಕೆ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ.

ನನ್ನ ತಂದೆಗೆ ಇಬ್ಬರು ಹೆಂಡತಿ ಎಂದರೆ ಸರಿ. ನನ್ನ ತಾಯಿ ಗೌರಮ್ಮ 2ನೇ ಹೆಂಡತಿ ಎಂದರೆ ಹೌದು. ಮೊದಲನೇ ಹೆಂಡತಿ ಹೆಸರು ಗೊತ್ತಾ ಎಂದರೆ ಸಾಕ್ಷಿ ಅವರ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆ ನನ್ನ ತಾಯಿ ಗೌರಮ್ಮರವರನ್ನು ಎರಡನೇ ಹೆಂಡತಿ ಮಾಡಿಕೊಂಡು ಬರುವ ಸಮಯದಲ್ಲಿ ಅವರ ಎಲ್ಲಾ ಆಸ್ತಿಗಳನ್ನು ಅವರ ಹಿರಿಯ ಹೆಂಡತಿ ಮತ್ತು ಮಕ್ಕಳಿಗೆ ಬಿಟ್ಟುಕೊಟ್ಟು ಬಂದಿರುತ್ತಾರೆ ಎಂದರೆ ಗೊತ್ತಿಲ್ಲ. ನನ್ನ ತಾಯಿಯ

ಎಲ್ಲಾ ವಿಚಾರಗಳು ನನಗೆ ಗೊತ್ತು. ನನ್ನ ತಾಯಿ ಗ್ರಾಮ ಪಂಚಾಯಿತಿಯಲ್ಲಿ ಸದಸ್ಯರಾಗಿದ್ದರು ಎಂದರೆ ಗೊತ್ತಿಲ್ಲ. ಒಂದು ಕಾಲದಲ್ಲಿ ನನ್ನ ತಾಯಿ ಗೌರಮ್ಮ ಹಳ್ಳಿಮೈಸೂರು ಹೋಬಳಿಯಲ್ಲಿ ಪ್ರಭಾವಿ ರಾಜಕಾರಣಿಯಾಗಿದ್ದರು ಎಂದರೆ ಗೊತ್ತಿಲ್ಲ. ನನ್ನ ತಾಯಿ ನನ್ನ ತಂದೆಯನ್ನು ಮದುವೆಯಾದ ನಂತರ ಸಾಕಷ್ಟು ಸ್ವಯಾರ್ಜಿತ ಆಸ್ತಿಗಳನ್ನು ಸಂಪಾದನೆ ಮಾಡಿದ್ದರು ಎಂದರೆ ಗೊತ್ತಿಲ್ಲ. ನನ್ನ ತಂದೆ ಸುಮಾರು 45 ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ ಎಂದರೆ ಗೊತ್ತಿಲ್ಲ. ನನ್ನ ತಂದೆ ತೀರಿಕೊಂಡ ನಂತರ ವೈಯಕ್ತಿಕ ಕುಟುಂಬದ ವಿಚಾರಗಳ ಬಗ್ಗೆ ನಮ್ಮ ತಾಯಿ ಗೌರಮ್ಮರವರನ್ನು ನಾವು ವಿಚಾರಣೆ ಮಾಡಿಲ್ಲ. ನಮ್ಮ ಕುಟುಂಬದ ಯಾವುದೇ ವೈಯಕ್ತಿಕ ವಿಚಾರಗಳು ನನಗೆ ಗೊತ್ತಿಲ್ಲ ಎಂದರೆ ಹೌದು. ನನಗೆ ನಮ್ಮ ಕುಟುಂಬದ ಸ್ವಯಾರ್ಜಿತ ಆಸಿತಗಳು ಯಾವುವು ಹಾಗೂ ಪಿತ್ರಾರ್ಜಿತ ಆಸ್ತಿಗಳು ಯಾವುವು ಎನ್ನುವ ಬಗ್ಗೆ ನನಗೆ ಪರಿಕಲ್ಪನೆಯೇ ಇಲ್ಲ ಎಂದರೆ ಸಾಕ್ಷಿ ಎಲ್ಲವೂ ಪಿತ್ರಾರ್ಜಿತ ಆಸ್ತಿಗಳೇ ಎಂದು ನುಡಿಯುತ್ತಾರೆ. ಈ ದಾವೆಯಲ್ಲಿ ನಾನು 5ನೇ ಪ್ರತಿವಾದಿಯ ಚಿತಾವಣೆಯ ಮೇರೆಗೆ ವಾದಿಯಾಗಿ ಸೇರ್ಪಡೆಯಾಗಿದ್ದೇನೆ ಎಂದರೆ ಹೌದು.

ಶ್ರೀ ಕೆ.ಕೆ.ಆರ್. ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲಿಗೆ ಸಮಯ ನೀಡಿ ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸ. ಇ. ಇದೆ.

(ಶ್ರೀಮತಿ. ನಿವೇದಿತಾ ಮಹಾಂತೇಶ್ ಮುನವಳ್ಳಿಮಠ್)
ಹಿ.ವ್ಯ.ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ರವರು ಹೊಳೆನರಸೀಪುರ.